ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 16–08–2022ರಂದು ನಡೆದ 42ನೇ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 42ನೇ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:16.08.2022ರಂದು ಮಂಗಳವಾರ ಬೆಳಗ್ಗೆ 11.00 ಗಂಟೆಗೆ ನಡೆಯಿತು.

ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:

1. ಪ್ರೊ. ಕೆ.ಇ ದೇವನಾಥನ್, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ಶ್ರೀಮತಿ ಉಮಾ ಕೆ, ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
3. ಶ್ರೀ ವೆಂಕಟೇಶಯ್ಯ ಎಂ.ಜಿ, ಉಪಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಮತ್ತು ಯೋಜನೆ), ಕರ್ನಾಟಕ ಸರ್ಕಾರ — ಸದಸ್ಯರು
4. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
5. ಪ್ರೊ. ವಿ ಗಿರೀಶ್‌ಚಂದ್ರ, ಕುಲಸಚಿವರು, ಕಸಂವಿ — ಸದಸ್ಯರು
6. ಶ್ರೀ ಎಸ್ ಕುಮಾರ, ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

ಗೈರು ಹಾಜರಿದ್ದ ಸದಸ್ಯರು:

1. ಡಾ. ಬಿ. ಶೈಲಶ್ರೀ, ಸಿಂಡಿಕೇಟ್ ಸದಸ್ಯರು, ಕಸಂವಿ — ಸದಸ್ಯರು

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 41ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 14.02.2022ರ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 2 | 41ನೇ ಸಭೆಯ ನಡಾವಳಿಯಂತೆ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 14.02.2022ರ ಸಭೆಯ ನಿರ್ಣಯದಂತೆ ಕ್ರಮವಹಿಸಿದ್ದು, ಅದರಂತೆ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 3 | 2021–22ನೇ ಸಾಲಿನ ಜನವರಿ–ಮಾರ್ಚ್2022ರ ಹಾಗೂ 2022–23ನೇ ಸಾಲಿನ ಏಪ್ರಿಲ್–ಜೂನ್ ವರೆಗಿನ ತ್ರೈಮಾಸಿಕ ಜಮಾ–ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ. |

| | |
|---|---|
| ಟಿಪ್ಪಣಿ | 2021-22ನೇ ಸಾಲಿನ ಜನವರಿ-ಮಾರ್ಚ್2022ರ ಹಾಗೂ 2022-23ನೇ ಸಾಲಿನ ಏಪ್ರಿಲ್-ಜೂನ್ ವರೆಗಿನ ತ್ರೈಮಾಸಿಕ ಜಮಾ-ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಜಮಾ-ಖರ್ಚನ್ನು ಅನುಮೋದಿಸಿತು. |
| ವಿಷಯ 4 | 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದೆ. ಹಣಕಾಸಿನ ವ್ಯವಹಾರಗಳನ್ನು M/S. D.N Joshi & Co. ರವರು ನಿರ್ವಹಿಸುತ್ತಿದ್ದಾರೆ. ಸದರಿಯವರು 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ಧಪಡಿಸಿ, ಸಲ್ಲಿಸಿರುವ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ವಾರ್ಷಿಕ ಲೆಕ್ಕಪತ್ರವನ್ನು ಅಂಗೀಕರಿಸಿತು ಹಾಗೂ ಲೆಕ್ಕಪರಿಶೋಧನೆಗಾಗಿ ರಾಜ್ಯಲೆಕ್ಕಪತ್ರ ಇಲಾಖೆಗೆ ಸಲ್ಲಿಸಲು ಶಿಫಾರಸ್ಸು ಮಾಡಿತು. |
| ವಿಷಯ 5 | 2022-23ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ ಬರುವ ಅನುದಾನ/ಆಂತರಿಕ ಹಾಗೂ ಯೋಜನೆಗಳ ಮೂಲಗಳಿಂದ ಬರಬಹುದಾದಂತಹ ಆದಾಯದನ್ವಯ ಅಂದಾಜಿನೊಡನೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಕ್ರಿಯಾ ಯೋಜನೆಯನ್ನು ಅನುಮೋದಿಸಿ ಸಂಬಂಧ ಪಟ್ಟ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿತು. |
| ವಿಷಯ 6 | ಸಿಬ್ಬಂದಿಗಳ ಅವಲಂಬಿತರಿಗೆ ವೈದ್ಯಕೀಯ ಬಿಲ್ಲನ್ನು ಪಾವತಿಸುವ ಬಗೆಗೆ. |
| ಟಿಪ್ಪಣಿ | ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚವನ್ನು ಸರ್ಕಾರದ ಕಾಲಕಾಲದ ಆದೇಶದಂತೆ ಮರುಪಾವತಿಸಲಾಗುತ್ತಿದೆ. ಈ ಸೌಲಭ್ಯವನ್ನು ಇವರ ಅವಲಂಬಿತರಿಗೂ ಸರ್ಕಾರದ ಕಾಲಕಾಲದ ಆದೇಶದಂತೆ ವಿಸ್ತರಿಸಬೇಕಿದೆ, ಅದರಂತೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸಭೆಯು ಸರ್ಕಾರದ ಕಾಲಕಾಲದ ಆದೇಶಗಳಂತೆ ನೌಕರರುಗಳ ಅವಲಂಬಿತರಿಗೂ ವೈದ್ಯಕೀಯ ವೆಚ್ಚವನ್ನು ವಿಸ್ತರಿಸಲು ಒಪ್ಪಿತು. |
| ವಿಷಯ 7 | National Language Translation Mission (NLTM) Project ಮತ್ತು Siddanta Knowledge ಸಂಸ್ಥೆಯ ಶಾಸ್ತ್ರ ಮ್ಯಾಪಿಂಗ್ ಯೋಜನೆಗಳಿಗೆ ಅನುದಾನವು ಬಿಡುಗಡೆಯಾಗಿದ್ದು ಇದರ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | National Language Translation Mission (NLTM) Projectನ ಅನುದಾನ ರೂ. 20,79,520/-ಗಳು ಮತ್ತು Siddanta Knowledge ಸಂಸ್ಥೆಯ ಶಾಸ್ತ್ರ ಮ್ಯಾಪಿಂಗ್‌ನ ಅನುದಾನ ರೂ.2,76,000/-ಗಳು ಬಿಡುಗಡೆಯಾಗಿದ್ದು, ಸಲ್ಲಿಸಲಾದ ಯೋಜನೆಯಂತೆ ಅನುಷ್ಠಾನಗೊಳಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಮಂಜೂರಾಗಿರುವ ಯೋಜನೆಯಲ್ಲಿ ಸೂಚಿಸಿರುವಂತೆ ಅನುಷ್ಠಾನಗೊಳಿಸಲು ಅನುಮೋದಿಸಿತು. |
| ವಿಷಯ 8 | ವಕೀಲರಾದ ಶ್ರೀ. ವೆಂಕಟೇಶ್‌ರವರ ಬಾಕಿ ಇರುವ ಶುಲ್ಕ ಹಾಗೂ ಕಸಂವಿಯ ವಕೀಲರ ಕಾನೂನು ಶುಲ್ಕವನ್ನು ಪಾವತಿಸುವ ಬಗೆಗೆ. |
| ಟಿಪ್ಪಣಿ | ವಕೀಲರಾದ ಶ್ರೀ. ವೆಂಕಟೇಶ್‌ರವರ ಬಾಕಿ ಇರುವ ಶುಲ್ಕ ಹಾಗೂ ಕಸಂವಿಯ ವಕೀಲರ ಕಾನೂನು ಶುಲ್ಕವನ್ನು ಪಾವತಿಸುವ ಸಂಬಂಧ ಸಮಿತಿ ರಚನೆ ಮಾಡಿತ್ತು ಸಮಿತಿಯ ವರದಿಯಲ್ಲಿ ಕೇಸ್‌ಗೆ ಸಂಬಂಧಪಟ್ಟಂತೆ ವಿವರವಾರು ಶುಲ್ಕ ನಿಗದಿಪಡಿಸಿ ವರದಿಯನ್ನು ನೀಡಿದೆ, ಅದರಂತೆ ವಕೀಲರಾದ ಶ್ರೀ. ವೆಂಕಟೇಶ್‌ರವರ ಹಿಂದಿನ ಬಾಕಿ ಇರುವ ಶುಲ್ಕವನ್ನು ರೂ.3,45,000/-(ಆಗಸ್ಟ್ 2020ರಿಂದ ಜುಲೈ 2022ರ ವರೆಗೆ ತಿಂಗಳಿಗೆ 15,000/- ರೂಗಳಾಗೆ) ನೀಡಲು, ಮುಂದೆ ಪ್ರತಿ ಕೇಸಿಗೆ ನೀಡುವ ಮೊತ್ತವನ್ನು ಉಲ್ಲೇಖಿಸಿದೆ. ಸಮಿತಿಯ ವರದಿಯಂತೆ ಜಾರಿಗೆ ತರಲು ಅನುಮೋದನೆಗಾಗಿ ಮಂಡಿಸಿದೆ. |

| | |
|---|---|
| ನಿರ್ಣಯ | ವಕೀಲರುಗಳಿಗೆ ಈ ಹಿಂದಿನ ಸಿಂಡಿಕೇಟ್ ತೀರ್ಮಾನದಂತೆ ಇದುವರೆಗೆ ಬಾಕಿ ಇರುವ ಶುಲ್ಕವನ್ನು ಬಿಡುಗಡೆ ಮಾಡಲು ಸಭೆಯು ಒಪ್ಪಿತು. ಹಾಗೆಯೇ 2022ರ ಆಗಸ್ಟ್ ತಿಂಗಳಿಂದ ಕೇಸಿಗೆ ಪ್ರಕರಣವಾರು ವೆಚ್ಚವನ್ನು ಸರ್ಕಾರದ ಕಾನೂನು ಇಲಾಖೆಯು ಕಾಲಕಾಲದಲ್ಲಿ ನಿಗದಿಪಡಿಸಿರುವ ಶುಲ್ಕದಂತೆ ನೀಡಲು ಒಪ್ಪಿಗೆ ಸೂಚಿಸಿತು. |
| ವಿಷಯ 9 | ಮೇಲುಕೋಟೆಯಿಂದ ಬೆಂಗಳೂರಿಗೆ ಆಗಮಿಸುವ ಹಣಕಾಸು ಅಧಿಕಾರಿಗಳ ಕಾರಿನ ಇಂಧನ ಪಾವತಿಸುವ ಬಗೆಗೆ. |
| ಟಿಪ್ಪಣಿ | ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್, ಮೇಲುಕೋಟೆ ಇಲ್ಲಿನ ಕುಲಸಚಿವರು(ಆಡಳಿತ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಭಾರ ಹಣಕಾಸು ಅಧಿಕಾರಿಗಳಾಗಿ ಸರ್ಕಾರವು ಅಧಿಕ ಪ್ರಭಾರದಲ್ಲಿರಿಸಿರುವುದರಿಂದ ಇವರು ಮೇಲುಕೋಟೆಯ ಕಛೇರಿಯ ವಾಹನದಲ್ಲಿ ಮೇಲುಕೋಟೆಯಿಂದ ಬೆಂಗಳೂರಿಗೆ ವಿಶ್ವವಿದ್ಯಾಲಯದ ಕೆಲಸ ನಿಮಿತ್ತ ಬರುತ್ತಿದ್ದಾರೆ. ಇವರು ಬಂದು ಹೋಗುವ ವಾಹನದ ಇಂಧನ ವೆಚ್ಚ ಹಾಗೂ ಅವರ ಚಾಲಕರ ದಿನಭತ್ಯೆ ಪಾವತಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 10 | ಬೋಧಕರಿಗೆ 2019ರಲ್ಲಿ CAS ನೀಡಿದ್ದು ಹಿಂದಿನ ಬಾಕಿಯನ್ನು ನೀಡುವ ಕುರಿತು. |
| ಟಿಪ್ಪಣಿ | ಬೋಧಕರಿಗೆ 2019ರಲ್ಲಿ CAS ನೀಡುವಾಗ, ಆದೇಶ ಹೊರಡಿಸುವ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ನೀಡಿರುತ್ತದೆ. ಬೋಧಕರಿಗೆ CAS ಅರ್ಹ ದಿನಾಂಕದಿಂದ ಆರ್ಥಿಕ ಸೌಲಭ್ಯವು ಬಿಡುಗಡೆಗೊಳಿಸಿಲ್ಲ, ಈ ಹಿನ್ನಲೆಯಲ್ಲಿ ಬೋಧಕರಿಗೆ ಅವರುಗಳ ಅರ್ಹಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಆರ್ಥಿಕ ಸೌಲಭ್ಯವನ್ನು ನೀಡುವಂತೆ ಕೋರಿಕೆ ಇಟ್ಟಿದ್ದಾರೆ. ಬೋಧಕರ ಮನವಿಯಂತೆ ಅರ್ಹರಾದ ದಿನದಿಂದ ಜಾರಿಗೆ ಬರುವಂತೆ ಹಿಂದಿನ ಬಾಕಿಯನ್ನು ನೀಡವ ಕುರಿತು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಬೋಧಕರುಗಳು ಅರ್ಹರಾದ ದಿನದಿಂದ ಆದೇಶ ಹೊರಡಿಸಲಾದ ದಿನದವರೆಗೆ ಉಂಟಾಗುವ ಬಾಕಿ ಮೊತ್ತದ ವಿವರಗಳ ಪಟ್ಟಿಯನ್ನು ತಯಾರಿಸುವುದು. ಸಂಬಂಧ ಪಟ್ಟ ಬೋಧಕರುಗಳು ಅರ್ಹರಾದ ದಿನದಿಂದ ಹೊರಡಿಸಲಾಗಿರುವ ಆದೇಶಗಳು ಇತ್ಯಾದಿಗಳೊಡನೆ ನಿಯಮಾನುಸಾರ ಅವಲೋಕಿಸಿ ಸ್ಪಷ್ಟ ಅಭಿಪ್ರಾಯಗಳೊಡನೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಒಪ್ಪಿಗೆ ನೀಡಿತು. |
| ವಿಷಯ 11 | 7 ಜನ ಸಹಾಯಕ ಪ್ರಾಧ್ಯಾಪಕರಿಗೆ ಹಾಗೂ ಒಬ್ಬರು ಸಹಾಯಕ ಗ್ರಂಥಪಾಲಕರಿಗೆ CAS ನೀಡುವ ಬಗೆಗೆ. |
| ಟಿಪ್ಪಣಿ | 7 ಜನ ಸಹಾಯಕ ಪ್ರಾಧ್ಯಾಪಕರಿಗೆ ಹಾಗೂ ಒಬ್ಬರು ಸಹಾಯಕ ಗ್ರಂಥಪಾಲಕರಿಗೆ ಯುಜಿಸಿ ನಿಯಮಾವಳಿಯಂತೆ CAS ನೀಡಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 12 | CAG & SAG ಆಡಿಟ್ ಆಕ್ಷೇಪಣೆ ಬಗ್ಗೆ ಆಡಾಕ್ ಸಮಿತಿಗೆ ಮುನ್ನ ವಿಶ್ವವಿದ್ಯಾಲಯದ ಹಂತದಲ್ಲಿಯೇ ಪೂರ್ವಭಾವಿಯಾಗಿ ಸಮಿತಿ ರಚಿಸುವ ಬಗ್ಗೆ. |
| ಟಿಪ್ಪಣಿ | CAG & SAG ಆಡಿಟ್ ಆಕ್ಷೇಪಣೆ ಬಗ್ಗೆ ಆಡಾಕ್ ಸಮಿತಿಗೆ ಮುನ್ನ ವಿಶ್ವವಿದ್ಯಾಲಯದ ಹಂತದಲ್ಲಿಯೇ ಪೂರ್ವಭಾವಿಯಾಗಿ ಸಮಿತಿ ರಚಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಆಂತರೀಕ ಸಮಿತಿಯನ್ನು ರಚಿಸಲು ಅನುಮೋದಿಸಿತು. |
| ವಿಷಯ 13 | ಆಡಿಟ್ ಆಕ್ಷೇಪಣೆಯಂತೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತಹ ನಿಧಿಗಳನ್ನು ಠೇವಣಿ ಮಾಡಲು ಹೂಡಿಕೆ ನೀತಿ ರಚಿಸುವ ಬಗೆಗೆ. |
| ಟಿಪ್ಪಣಿ | ಆಡಿಟ್ ಆಕ್ಷೇಪಣೆಯಂತೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತಹ ನಿಧಿಗಳನ್ನು ಠೇವಣಿ ಮಾಡಲು ಹೂಡಿಕೆ ನೀತಿ ರಚಿಸಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 14 | ಇಲಾಖಾ ಪದೋನ್ನತಿ ಸಮಿತಿಯ (DPC) ವರದಿಯನ್ನು ಶಿಫಾರಸ್ಸಿನಂತೆ ಜಾರಿಗೊಳಿಸುವ ಬಗೆಗೆ. |
| ಟಿಪ್ಪಣಿ | ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನಲ್ಲಿ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಮುನ್ನ ಇಲಾಖಾ ಪದೋನ್ನತಿ ಸಮಿತಿಯನ್ನು ರಚನೆ ಮಾಡಿತ್ತು. ಸದರಿ ಸಮಿತಿಯು ದಿನಾಂಕ:07.05.2022ರಲ್ಲಿ ವರದಿಯನ್ನು ಸಲ್ಲಿಸಿದೆ. ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸಂಸ್ಥೆಯ ನೇಮಕಾತಿ ಪ್ರಾಧಿಕಾರವಾದ 2ನೆಯ ಆಡಳಿತ ಸಮಿತಿಯ ಮುಂದೆ ವಿಷಯ (6)ರಲ್ಲಿ ಮಂಡಿಸಲಾಗಿತ್ತು. ಆಡಳಿತ |

| | |
|---|---|
| | ಸಮಿತಿಯು ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಒಪ್ಪಿದ್ದು, ಸಂಸ್ಥೆಯು ಪ್ರಸ್ತುತ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆ/ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದ ಈ ಅಂಶವನ್ನು ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ಮಂಡಿಸಲು ನಿರ್ಣಯಿಸಿರುತ್ತಾರೆ. ಅದರಂತೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 15 | ವಿದ್ವಾನ್ ಕೆ.ಶ್ರೀನಿವಾಸನ್ ಹಾಗೂ ಶ್ರೀ ಎಸ್.ಆರ್. ಗಿರೀಶ ಇವರನ್ನು ವೇತನಾನುದಾನಕ್ಕೆ ಒಳಪಡಿಸುವ ಬಗೆಗೆ. |
| ಟಿಪ್ಪಣಿ | ಭಗವದ್ ರಾಮನುಜ ರಾಷ್ಟ್ರೀಯ ಸಂಶೋಧನ ಸಂಸತ್‌ನಲ್ಲಿ 2008 ರಿಂದ ಇಲ್ಲಿಯವರೆಗೆ ವಿದ್ವಾನ್ ಕೆ.ಶ್ರೀನಿವಾಸನ್, ಗ್ರಂಥಪಾಲಕ/ಜೆಆರ್‌ಎ ಮತ್ತು ಶ್ರೀ ಎಸ್.ಆರ್. ಗಿರೀಶ, ಅಟೆಂಡರ್ ಹುದ್ದೆಯ ಮೇಲೆ ಗುತ್ತಿಗೆ/ಹೊರಗುತ್ತಿಗೆಯ ಆಧಾರದ ಮೇಲೆ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ಸದರಿಯವರುಗಳು ಸರ್ಕಾರಕ್ಕೆ ವೇತನಾನುದಾನಕ್ಕೊಳಪಡಿಸಲು ಪ್ರಾರ್ಥನಾ ಪತ್ರವನ್ನು ಸಲ್ಲಿಸಿದ್ದು, ಸರ್ಕಾರವು ನಿಯಮನುಸಾರ ಕ್ರಮಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದೆ. ಸದರಿ ಅಂಶವನ್ನು ನೇಮಕಾತಿ ಪ್ರಾಧಿಕಾರವಾದ ಆಡಳಿತ ಸಮಿತಿಯ ವಿಷಯ (11)ರಲ್ಲಿ ಮಂಡಿಸಿದ್ದು, ಸದರಿಯವರುಗಳ ಸುಧೀರ್ಘ ಸೇವೆ ಹಾಗೂ ಖಾಲಿ ಇರುವ ಹುದ್ದೆಗೆ ವೇತನಾನುದಾನಕ್ಕೊಳಪಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಒಪ್ಪಿರುತ್ತದೆ. ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಂಬಂಧಿಸಿದ ನೌಕರರುಗಳನ್ನು ಗುತ್ತಿಗೆ ಮೇಲೆ ನೇಮಿಸಿದ ದಿನಾಂಕ, ಆದೇಶಗಳು, ಸದರಿ ಹುದ್ದೆಗಳು ಖಾಲಿ ಇರುವ ಬಗ್ಗೆ ವೇತನಾನುದಾನಕ್ಕೆ ಒಳಪಟ್ಟಿರುವ ಬಗ್ಗೆ ಹಾಗೂ ಇನ್ನಿತರ ವಿವರಗಳೊಡನೆ ಮಾಹಿತಿಯನ್ನೊಳಗೊಂಡಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಒಪ್ಪಿತು. ಸರ್ಕಾರವು ಮುಂದೆ ಸೂಚಿಸುವ ನಿರ್ದೇಶನದಂತೆ ಕ್ರಮ ವಹಿಸಲು ಸಭೆಯು ಸೂಚಿಸಿತು.** |
| ವಿಷಯ 16 | **9ನೇ ದೀಕ್ಷಾಂತ ಘಟಿಕೋತ್ಸವದ ವೆಚ್ಚವನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 9ನೇ ದೀಕ್ಷಾಂತ ಘಟಿಕೋತ್ಸವನ್ನು ವಿಶೇಷವಾಗಿ ಸನ್ಮಾನ್ಯ ಉಪ ರಾಷ್ಟ್ರಪತಿಯವರು, ಗೌರವಾನ್ವಿತ ರಾಜ್ಯಪಾಲರನ್ನು ಆಹ್ವಾನಿಸಿ ರಾಜಭವನದ ಗಾಜಿನ ಮನೆಯಲ್ಲಿ ಯಶಸ್ವಿಯಾಗಿ ನೆರವೇರಿಸಲಾಗಿದೆ. ಇದಕ್ಕೆ ಸಂಬಂಧ ಪಟ್ಟ ರೂ. 12,07,961/- ರ ಖರ್ಚು-ವೆಚ್ಚಗಳನ್ನು ಅನುಮೋದಿಸಲು ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು ಮತ್ತು ಪ್ರಶಂಸಿಸಿತು.** |
| ವಿಷಯ 17 | **ಸಂಸ್ಕೃತೋತ್ಸವ ಕಾರ್ಯಕ್ರಮಕ್ಕೆ ಅಂದಾಜು 3.00ಲಕ್ಷ ರೂಗಳನ್ನು ಮಂಜೂರು ಮಾಡುವ ಬಗೆಗೆ.** |
| ಟಿಪ್ಪಣಿ | ಪ್ರತಿ ವರ್ಷದಂತೆ ಈ ವರ್ಷವು ಶ್ರಾವಣ ಮಾಸದಲ್ಲಿ ಸಂಸ್ಕೃತೋತ್ಸವ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು, ಈ ಕಾರ್ಯಕ್ರಮಕ್ಕೆ ರೂ. 3.00ಲಕ್ಷಗಳ ಖರ್ಚು-ವೆಚ್ಚಗಳು ಆಗಬಹುದೆಂದು ಅಂದಾಜಿಸಲಾಗಿದೆ, ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| ವಿಷಯ 18 | **ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ನವದೆಹಲಿಯಿಂದ ರಾಷ್ಟ್ರೀಯ ಸ್ಪರ್ಧೆಗಳಿಗಾಗಿ 85.00ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಖರ್ಚು-ವೆಚ್ಚ ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 2021-22ನೇ ಮಾರ್ಚ್ ತಿಂಗಳಲ್ಲಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ನವದೆಹಲಿಯಿಂದ ರಾಷ್ಟ್ರೀಯ ಸ್ಪರ್ಧೆಗಳಿಗಾಗಿ 85.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.74,14,051/-ಗಳು ಖರ್ಚಾಗಿದ್ದು, ಉಳಿಕೆ 10,85,949/-ರೂಗಳನ್ನು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮರುಪಾವತಿಸಲಾಗಿದೆ. ಇದರ ಖರ್ಚು-ವೆಚ್ಚದ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು ಮತ್ತು ಪ್ರಶಂಸಿಸಿತು.** |
| ವಿಷಯ 19 | **ಆಡಳಿತ ಕಛೇರಿಯ 2ನೇ ಮಹಡಿಯಲ್ಲಿ ನ್ಯಾಕ್ ಸಿದ್ಧತೆಗಾಗಿ ಷೆಡ್ಡು ನಿರ್ಮಿಸಲು ಅನುಮೋದನೆಗಾಗಿ.** |
| ಟಿಪ್ಪಣಿ | ಆಡಳಿತ ಕಛೇರಿಯ 2ನೇ ಮಹಡಿಯಲ್ಲಿ ನ್ಯಾಕ್ ಸಿದ್ಧತೆಗಾಗಿ ಷೆಡ್ಡು ನಿರ್ಮಿಸಲು ಕೆಆರ್‌ಐಡಿಎಲ್ ರವರಿಂದ 30.00ಲಕ್ಷ ರೂಗಳಿಗೆ ಅಂದಾಜು ಪಟ್ಟಿ ಪಡೆಯಲಾಗಿದ್ದು, ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸರ್ಕಾರದ ಅಂಗೀಕೃತ ಏಜೆನ್ಸಿಯಾದ ಕೆಆರ್‌ಐಡಿಎಲ್ ಸಂಸ್ಥೆಗೆ ನಿಯಮಾನುಸಾರ ಷೆಡ್ಡು ನಿರ್ಮಿಸಲು ಒಪ್ಪಿತು. ಹಾಗೆಯೇ ಈ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರೀಕ ಮೂಲದಿಂದ ಭರಿಸಲು ಒಪ್ಪಿತು.** |

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರ ವಿಷಯಗಳು |
|---|---|
| ವಿಷಯ 01 | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ ಮಾದರಿ ಪರಿನಿಯಮಾವಳಿಗಳ ಕಳುಹಿಸುತ್ತಿರುವ ಕುರಿತು. |
| ಟಿಪ್ಪಣಿ | ಮೇಲಿನ ವಿಷಯದಂತೆ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಮುನ್ನೋಟದಿಂದ ಹಾಗೂ ಸ್ವಾವಲಂಬಿ ಸಂಸ್ಥೆಗಳನ್ನಾಗಿಸಲು ಮತ್ತು ವಿಶ್ವವಿದ್ಯಾನಿಲಯಗಳಲ್ಲಿನ ನೇಮಕಾತಿ ವಿಧಿ-ವಿಧಾನಗಳ ಕುರಿತು ವರದಿಯನ್ನು ಸಲ್ಲಿಸಲು ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ಕೆಲವು ಸಲಹೆಗಳೊಂದಿಗೆ ಯುಜಿಸಿ ನಿಯಮಾವಳಿಗಳು 2018ರ ಆಧಾರದ ಮೇಲೆ "The Statue Relating To Appointment and Promotion of Teachers & Other Academic Staff and Measures for the Maintenance of Standards in Higher Education in the University, As per the UGC Regulations, 2018" ಅನ್ನು ರಚಿಸಿ ವಿಶ್ವವಿದ್ಯಾಲಯಕ್ಕೆ ಪತ್ರ ಸಲ್ಲಿಕೆಯಾಗಿದೆ. ಸದರಿ ನಿಯಮಾವಳಿಯನ್ನು ಅಳವಡಿಸುವ ಸಂಬಂಧ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 02 | Updating the website for NAAC ಕುರಿತು. |
| ಟಿಪ್ಪಣಿ | ವಿಶ್ವವಿದ್ಯಾಲಯವು ಪ್ರಸ್ತುತ NAAC ಮಾನ್ಯತೆ ಪಡೆಯಲು ಸಾಗುತ್ತಿದೆ. ಈ ಸಂದರ್ಭದಲ್ಲಿ ಪ್ರಸ್ತುತ ಇರುವ website ನಲ್ಲಿ ಅಳವಡಿಸಲು ಕಷ್ಟವಾಗುತ್ತಿರುವ ಹಿನ್ನಲೆಯಲ್ಲಿ ಮುಂದುವರೆದ ಹಾಗೂ ಅನುಕೂಲ ತಾಂತ್ರಿಕ ಸಹಾಯವನ್ನು ಪಡೆದು ಸುಲಲಿತವಾಗಿ ಕಾರ್ಯ ಚಟುವಟಿಕೆಗಳನ್ನು ಬಿಂಬಿಸಲು ಸಹಕಾರ ನೀಡುವಂತೆ ವಿಭಾಗದ ಮುಖ್ಯಸ್ಥರಿಂದ ಪ್ರಸ್ತಾವನೆ ಬಂದಿರುತ್ತದೆ. ಸದರಿ ಪ್ರಸ್ತಾವನೆಯು NAAC ಮಾನ್ಯತೆ ಪಡೆಯಲು ಅವಶ್ಯವಾಗಿರುವುದರಿಂದ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ನಿಯಮಾನುಸಾರ ಕ್ರಮವಹಿಸಲು ಸಭೆಯು ಒಪ್ಪಿತು. |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

(ಕುಮಾರ ಎಸ್) 16/8/2022
ಹಣಕಾಸು ಅಧಿಕಾರಿಗಳು
ಸದಸ್ಯ ಕಾರ್ಯದರ್ಶಿ

(ಪ್ರೊ. ಕೆ.ಇ ದೇವನಾಥನ್)
ಕುಲಪತಿಗಳು
ಅಧ್ಯಕ್ಷರು

ದಿನಾಂಕ: 16.08.2022